ಸಾಕ್ಷಿಯನ್ನು ದಿನಾಂಕಃ **15.10.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃಶ್ರೀ ವಿ.ಆರ್.ಎನ್. ವಕೀಲರಿಂದಃ**

ನಾವು ರಾಜೇಶ ನಾಯ್ಕ ಹೆಸರಿನಲ್ಲಿ ದಾವೆಯನ್ನು ದಾಖಲಿಸಿದ್ದೆವು, ಆದರೆ ಆತನ ಹೆಸರಿನಲ್ಲಿ RTC ಇರಲಿಲ್ಲ. ನಾನು ಮತ್ತು ನಮ್ಮ ತಮ್ಮನಾದ ಚಾಸಾ 1 ರವರು ಕೂಡಿಕೊಂಡು ಆರೋಪಿತರಿಗೆ ತೊಂದರೆ ಕೊಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಓಣಜಿಯ ಪೂರ್ವ ಭಾಗದಲ್ಲಿ ಕೊಟ್ಟಿಗೆ ಇದೆ, ಆದರೆ ನನಗೆ ಸ್ಪಷ್ಟವಾಗಿ ದಿಕ್ಕನ್ನು ಹೇಳಲು ಆಗುವುದಿಲ್ಲ. ಓಣಜಿಯ ಎಡಬದಿಗೆ ಕೊಟ್ಟಿಗೆ ಇರುತ್ತದೆ. ಸದ್ರಿ ಓಣಜಿಯ ಪಕ್ಕದಲ್ಲಿಯೇ ಕೊಟ್ಟಿಗೆ ಇದೆ. ಸದ್ರಿ ಕೊಟ್ಟಿಗೆ ಓಣಜಿಯಿಂದ ಎಷ್ಟು ಪೂಟ್ ಎತ್ತರದಲ್ಲಿದೆ ಎಂದರೆ ನಾನು ಅಳತೆ ಮಾಡಿಲ್ಲ ಎಂಬುದಾಗಿ ನುಡಿದಿದ್ದಾರೆ, ಆದರೆ ಅಂದಾಜು 2 ಮಾರಿನಷ್ಟು ಎತ್ತರವಿರಬಹುದು. ಪೋಲಿಸರು ಪಂಚನಾಮೆಗೆ ಘಟನಾ ಸ್ಥಳಕ್ಕೆ ಬಂದಿದ್ದರು. ಪೋಲಿಸರು ಪಂಚನಾಮೆಯ ಕಾಲಕ್ಕೆ ಕೊಟ್ಟಿಗೆಯನ್ನು ಅಳತೆ ಮಾಡಿಲ್ಲ. ನಾವು ಕೊಟ್ಟಿಗೆಯಿಂದ ದನಗಳನ್ನು ಓಣಜಿಗೆ ಬಿಡಲು ಮೆಟ್ಟಿಲುಗಳಿವೆ, ಅಲ್ಲಿ ಅಂದಾಜು 10 ಮೆಟ್ಟಿಲುಗಳಿವೆ.

ಸದ್ರಿ ಮೆಟ್ಟಿಲುಗಳು ಕಡುಗಲ್ಲಿನಿಂದ ಕಟ್ಟಲಾಗಿದೆ ಹಾಗೂ ಒಂದೊಂದು ಮೆಟ್ಟಿಲಿನ ನಡುವಿನ ಅಂತರ 1 ಫೂಟ್ ಇರುತ್ತದೆ. ಸದ್ರಿ ಮೆಟ್ಟಿಲುಗಳನ್ನು ಹೊರತುಪಡಿಸಿ ಕೊಟ್ಟಿಗೆಗೆ ಹೋಗಲು ಮತ್ತು ಬರಲು ಜಾನುವಾರುಗಳಿಗೆ ಬೇರೆ ದಾರಿ ಇಲ್ಲ. ನಾನು ಮತ್ತು ಚಾಸಾ 1 ರವರು ಆ ದಿನ ಕೊಟ್ಟಿಗೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿ ಮತ್ತು ನಮ್ಮ ನಡುವೆ ಗಲಾಟೆ ನಡೆಯಿತು. ಆರೋಪಿತರು ಆ ದಿನ ನಾವು ಕೆಲಸ ಮಾಡುವ ಜಾಗಕ್ಕೆ ಬಂದಿದ್ದರು. ನಾಗರಾಜ ವಿಷ್ಣು ಮೇಸ್ತ ರವರು ಮೊದಲಿಗೆ ಅಲ್ಲಿಗೆ ಬಂದು, ಸಿಮೆಂಟ್‌ನ ಕೊಟ್ಟಿಗೆಯ ಕೆಳಭಾಗದ ತಡೆಗೋಡೆಯನ್ನು ಒಡೆಯಲು ಪಾರಂಭಿಸಿದರು.

ಆರೋಪಿತರು ಆ ದಿನ ಕೊಟ್ಟಿಗೆಯ ಮೆಟ್ಟಿಲುಗಳನ್ನು ಮೊದಲೇ ಒಡೆದಿದ್ದರು. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ನಾನು ಆ ದಿನ 6 ಜನ ವ್ಯಕ್ತಿಗಳು ಸ್ಥಳಕ್ಕೆ ಬಂದಿದ್ದನ್ನು ಪೋಲಿಸರ ಮುಂದೆ ಹೇಳಿದ್ದೆನು. ನಮ್ಮ ಮನೆಯ ಅಂದಾಜು 50 ಮೀಟರ್ ವ್ಯಾಪ್ತಿಯ ಒಳಗಡೆ ಸುಮಾರು 3 ಮನೆಗಳಿವೆ. ಆರೋಪಿತರು ಸಿಮೆಂಟ್ ಕಟ್ಟೆಯನ್ನು ಅಗೆಯುವಾಗ ನಾವು ಗೌಜಿ ಹಾಕಿದೆವು. ಆ ಸಮಯದಲ್ಲಿ ಬೇರೆ ಜನ ಅದನ್ನು ನೋಡಿರಬಹುದು, ಆದರೆ ಅದನ್ನು ತಪ್ಪಿಸಲು ಯಾರೂ ಬರಲಿಲ್ಲ. ನಮ್ಮ ಅಕ್ಕಪಕ್ಕದ ಮನೆಯವರ ಮತ್ತು ನಮ್ಮ ಸಂಬಂಧ ಚೆನ್ನಾಗಿರುವುದಿಲ್ಲ. ಸದ್ರಿ ಓಣಜಿಯಲ್ಲಿ ಸಾರ್ವಜನಿಕರು ತಿರುಗಾಡುತ್ತಾರೆ. ಸದ್ರಿ ದಾರಿಯಲ್ಲಿ ಯಾರಾದರೂ ತಿರುಗಾಡಿದರೆ ಅಕ್ರಮ ಪ್ರವೇಶವಾಗುವುದಿಲ್ಲ.

ನನ್ನ ತಮ್ಮ ಆರೋಪಿತರನ್ನು ತಡೆದನು. ಚಾಸಾ 1 ರವರು ನಾಗರಾಜ ಮೇಸ್ತರವರನ್ನು ತಡೆದನು. ಆರೋಪಿತರು ಹಾರೆ, ಕುಟಾರಿ ಮತ್ತು ಪಿಕಾಸಿಯಿಂದ ಸಿಮೆಂಟನ್ನು ಅಗೆಯುತ್ತಿದ್ದರು. ಕುಟಾರಿ 3 ನೇ ಆರೋಪಿಯ ಹತ್ತಿರವಿತ್ತು. ಹಾರೆ

2 ನೇ ಆರೋಪಿಯ ಕೈಯ್ಯಲ್ಲಿತ್ತು. ಪಿಕಾಸಿ 5 ನೇ ಆರೋಪಿಯ ಕೈಯ್ಯಲ್ಲಿತ್ತು. ಇನ್ನುಳಿದವರ ಆರೋಪಿತರ ಹತ್ತಿರ ಬೇರೆ ಆಯುಧ ಇರಲಿಲ್ಲ. ಸದ್ರಿ ವಿಷಯವನ್ನು ನಾನು ಪೋಲಿಸರ ಮುಂದೆ ಹೇಳಿದ್ದೇನೆ. ನಾಗರಾಜ ಮೇಸ್ತ ಚಾಸಾ 1 ರವರಿಗೆ ಹೊಡೆದನು. 1 ನೇ ಆರೋಪಿಯು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು ಕೆಸರಿನಲ್ಲಿ ತಳ್ಳಿ ಹಾಕಿ ಹೊಡೆದಿದ್ದಾರೆ. ನಾನು ಆ ದಿನ ಶರ್ಟ ಮತ್ತು ಪ್ಯಾಂಟ್ ಧರಿಸಿದ್ದೆನು. ನನ್ನ ಶರ್ಟ ಮತ್ತು ಪ್ಯಾಂಟಿಗೆ ಕೆಸರು ಹತ್ತಿತ್ತು. ನಾನು ಪೋಲಿಸರ ಮುಂದೆ ಸದ್ರಿ ವಿಷಯವನ್ನು ಹೇಳಿದ್ದೆನು ಹಾಗೂ ನನ್ನ ಶರ್ಟ ಮತ್ತು ಪ್ಯಾಂಟ್ ತೆಗೆದು ಇಟ್ಟಿದ್ದೆನು, ಆದರೆ ಪೋಲಿಸರ ಮುಂದೆ ಅವುಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಪೋಲಿಸರ ಮುಂದೆ ಕೆಸರಿನಲ್ಲಿ ಬಿದ್ದ ಸ್ಥಳವನ್ನು ತೋರಿಸಿದ್ದೇನೆ, ಆದರೆ ಪೋಲಿಸರು ನನ್ನ ಶರ್ಟ ಮತ್ತು ಪ್ಯಾಂಟ್‌ನ ಬಗ್ಗೆ ವಿಚಾರಿಸಿಲ್ಲ.

ನನ್ನ ಎಡಗೈ ಮೇಲೆ ತೆರಚಿದ ಗಾಯವಾಗಿತ್ತು, ಆದರೆ ನಾನು ಚಿಕಿತ್ಸೆಯನ್ನು ಪಡೆದಿಲ್ಲ. ಪೋಲಿಸರು ನನಗೆ ಚಿಕಿತ್ಸೆಯನ್ನು ಪಡೆಯಲು ಸೂಚಿಸಿಲ್ಲ, ಆದರೆ ಚಾಸಾ 1 ರವರು ಚಿಕಿತ್ಸೆಯನ್ನು ಪಡೆದಿದ್ದಾರೆ. ಆ ದಿನ ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 1 ರವರು ಸೇರಿಕೊಂಡು ಆರೋಪಿತರ ವಿರುದ್ಧ ದ್ವೇಷ ಸಾಧಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.